ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾಲ್ಕೈದು ವಿಷಯಗಳು ಇವೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಅವಕಾಶ ಮಾಡಿ ಕೊಟ್ಟರೆ 10 ನಿಮಿಷದಲ್ಲಿ ಪೂರೈಸಬಹುದು.

ಶ್ರೀ ಜಗದೀಶ್ ಶೆಟ್ಟರ್ : ಮತ್ತೆ ಬೇರೆ ಯಾವುದೂ ಚರ್ಚೆಗೆ ತೆಗೆದುಕೊಳ್ಳಕೂಡದು.

ಅಧ್ಯಕ್ಷರು : ಆಯಿತು.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :–

ವಿಷಯ : KPSC ನೇಮಕಾತಿ ಸಂದರ್ಶನದಲ್ಲಿ ನಡೆದಿರುವ ಅವ್ಯವಹಾರ ಕುರಿತು.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, KPSC ಯಲ್ಲಿ ನಡೆದಿರುವಂತಹ KAS ಅಧಿಕಾರಿಗಳ ನೇಮಕಾತಿ ಸಂದರ್ಶನದ ನೆಪದಲ್ಲಿ ಅಕ್ರಮವೆಸಗುತ್ತಿರುವ ಹಾಗೂ ಸ್ವಜನ ಪಕ್ಷಪಾತ, ವ್ಯಾಪಕ ಭ್ರಷ್ಟಾಚಾರ ನಡೆದಿರುವ ಕುರಿತು ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಡಾ: ಮೈಥಿಲಿ, HPS,MBBS, MD., ಮಕ್ಕಳ ತಜ್ಞರು, ಬೆಂಗಳೂರು, ಇವರು ಒಂದು ದೂರನ್ನು 24.05.2013 ರಂದು ಬೆಳಿಗ್ಗೆ 10.00 ಗಂಟೆಗೆ ಖುದ್ದಾಗಿ ಒಂದು, "ಕರ್ನಾಟಕ ಲೋಕಸೇವಾ ಆಯೋಗವು ಅಭ್ಯರ್ಥಿಗಳ ಆಯ್ಕೆಯಲ್ಲಿ ಮೆರಿಟ್ ಪರಿಗಣಿಸದೆ ಅನ್ಯಾಯ ಅಕ್ರಮ ನಡೆಸುತ್ತಿದ್ದು KPSC ಯಲ್ಲಿ ಇತ್ತೀಚೆಗೆ ನಡೆಸಿದ ಗೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಯಲ್ಲಿ ನಾನು 1009 ಅಂಕ ಪಡೆದು ಪರಿಶಿಷ್ಟ ಪಂಗಡದ ಮಹಿಳೆಯರ ಪೈಕಿ ರಾಜ್ಯದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಅಭ್ಯರ್ಥಿಯಾಗಿರುತ್ತೇನೆ. ನನ್ನ ನಂತರದ ಎರಡನೇ ಸ್ಥಾನದಲ್ಲಿ ಅಂಕ ಪಡೆದವರು 937.5 ಅಂಕ ಪಡೆದು ನನಗಿಂತ 72.5 ಅಂಕ ಕಡಿಮೆ ಪಡೆದಿರುತ್ತಾರೆ. ಈ ಬಾರಿ ಪರೀಕ್ಷೆಯಲ್ಲಿ ಎಸ್.ಟಿ.ಪಂಗಡದ ಮಹಿಳೆಯರಿಗಾಗಿ ಒಂದು ಸ್ಥಾನ Assistant Commissioner ಹುದ್ದೆಗೆ ಮೀಸಲಾಗಿರುತ್ತದೆ. ಮೆರಿಟ್ ಪರಿಗಣಿಸಿದಲ್ಲಿ ಈ ಹುದ್ದೆಗೆ ಆಯ್ಕೆಯಾದ ನಾನು ಎಲ್ಲಾ ರೀತಿಯಲ್ಲಿ ಅರ್ಹಳಾಗಿರುತ್ತೇನೆ. ಮೇ 10 ರಂದು ನನ್ನ ಸಂದರ್ಶನ ನಡೆಯಿತು. ಆದರೆ ದುರಂತದ ಸಂಗತಿ ಎಂದರೆ, ಲೋಕಸೇವಾ ಆಯೋಗವು ನಡೆಸಿದ ವ್ಯಕ್ತಿತ್ವ ಪರೀಕ್ಷೆಯ ಸಂದರ್ಶನದಲ್ಲಿ 1009 ಅಂಕ ಪಡೆದ ನನಗೆ 75 ಅಂಕ ನೀಡಿ,

937.5 ಅಂಕ ಪಡೆದವರಿಗೆ 150 ಅಂಕ ನೀಡುವ ಮೂಲಕ ನನಗಿಂತ ಕೆಳಗಿದ್ದ ಅಭ್ಯರ್ಥಿಯನ್ನು ನನ್ನ ಮೇಲಿನ ಅಭ್ಯರ್ಥಿ ಎಂದು ಪರಿಗಣಿಸಲಾಗಿದೆ...."

ಅಧ್ಯಕ್ಷರು :– ಮಾನ್ಯ ಯಡಿಯೂರಪ್ಪನವರೆ ನೀವು ಅವರ petition ಓದುತ್ತಿದ್ದೀರಿ. ನೀವು ಆ petition ನಲ್ಲಿರುವುದನ್ನು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ಇದನ್ನು ಹಗುರವಾಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಕೆ.ಪಿ.ಎಸ್.ಸಿ.ಯಲ್ಲಿ ಏನು ಅನ್ಯಾಯ ನಡೆಯುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತೀರ್ಮಾನ ನಿಮಗೆ ಬಿಟ್ಟಂಥದ್ದು. ನನಗೆ ಅಲ್ಲಿ ನಡೆದಿರುವಂಥದ್ದರ ಬಗ್ಗೆ ವಿವರಗಳನ್ನೇ ಹೇಳಲು ಬಿಡದಿದ್ದರೆ ಹೇಗೆ? ಅಲ್ಲಿ ನಡೆದಿರುವಂಥದ್ದೇನೆಂದರೆ, ಕೆ.ಪಿ.ಎಸ್.ಸಿ. ಮೆಂಬರ್ ಆದವರೇ ಈ ರೀತಿ ಕೇಳಿರುವುದು ರಾಜ್ಯದ ಇತಿಹಾಸದಲ್ಲಿ ನಡೆದಿರುವ ಮೊದಲ ಸಂಗತಿಯೆಂದು ನಾನು ಹೇಳುತ್ತಿದ್ದೇನೆ. ಡಾ: ಮೈಥಿಲಿ ಎನ್ನುವ ಅಭ್ಯರ್ಥಿಯ ಮೊಬೈಲ್ ನಂಬರ್ 9591336699, ಇವರಿಗೆ ಕೆ.ಪಿ.ಎಸ್.ಸಿ. ಮೆಂಬರ್ ಫೋನ್ ಮಾಡಿದ್ದಾರೆ, ಕೆ.ಪಿ.ಎಸ್.ಸಿ. ಯ ಅವರ ಫೋನ್ ನಂಬರ್ 9945585567, ಮಾರ್ಚ್ 20 ಮತ್ತು 22ರ ದಿನಾಂಕದಲ್ಲಿ ಫೋನ್ ಮಾಡಿ ಅವರಿಗೆ ಮೆಸೆಜ್ ಕೊಡುತ್ತಾರೆ, ನೀವು ಬಂದು ನಮ್ಮನ್ನು ಭೇಟಿ ಮಾಡಬೇಕೆಂದು. ಡಾ: ಮೈಥಿಲಿಯವರು ಅವರನ್ನು ಭೇಟಿ ಮಾಡುವುದಕ್ಕೆ ಹೋದಾಗ ಕೆ.ಪಿ.ಎಸ್.ಸಿ. ಮೆಂಬರ್ ಬಹಳ ಸ್ಪಷ್ಟವಾಗಿ ಹೇಳುತ್ತಾರೆ, ನೀನು ಸುಮಾರು 75 ಲಕ್ಷ ರೂ.ಗಳನ್ನು ತಂದುಕೊಟ್ಟರೆ ನಿನ್ನನ್ನು ನಾನು ಆಯ್ಕೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾರೆ. ಅದಾದ ಮೇಲೆ ಕೆ.ಪಿ.ಎಸ್.ಸಿ. ಮೆಂಬರ್ ಪಿ.ಎ.ಮೂರು ಬಾರಿ ಈ ಹೆಣ್ಣು ಮಗಳಿಗೆ ಫೋನ್ ಮಾಡುತ್ತಾಳೆ, ಆ ಪಿ.ಎ. ಮೊಬೈಲ್ ನಂಬರ್ 9739008228, ಮಾರ್ಚ್ 21 ನೇ ತಾರೀಖು ಈ ಘಟನೆ ನಡೆಯುತ್ತದೆ. ಇದಾದ ಮೇಲೆ ಛೇಂಬರ್‌ಗೆ ಬರುವುದಕ್ಕೆ ಅವರು ಹೇಳುತ್ತಾರೆ, ಛೇಂಬರ್‌ಗೆ ಇವರು ಹೋದರು, ಅಲ್ಲಿ ಮೆಂಬರ್ ಪಿ.ಎ. ಹೇಳುತ್ತಾನೆ, ಬೇರೆಯವರಿಗೆ ಆದರೆ ಒಂದು ಕೋಟಿಯಿಂದ ಒಂದೂವರೆ ಕೋಟಿಯವರೆಗೆ ತೆಗೆದುಕೊಳ್ಳುತ್ತಿದ್ದೇನೆ, ಆದರೆ ನೀವು ಎಸ್.ಟಿ. ಕ್ಯಾಂಡಿಡೇಟ್ ಆಗಿರುವುದರಿಂದ ನೀನು 75 ಲಕ್ಷ ರೂ.ಗಳನ್ನು ಕೊಡು, ಕೆಲಸ ಮಾಡಿಸಿಕೊಡುತ್ತೇನೆ ಎನ್ನುವಂಥ ಒತ್ತಾಯವನ್ನು ಮಾಡುತ್ತಾನೆ. ಆದಾದ ಮೇಲೆ ಪರೀಕ್ಷೆಯಲ್ಲಿ ಅವರಿಗೆ ಕಡಿಮೆ ಅಂಕಗಳನ್ನು ಕೊಡುತ್ತಾರೆ. ಇವರು ಅಸಿಸ್ಟೆಂಟ್ ಕಮಿಷನರ್ ಆಗಬೇಕಾದರೆ ಎರಡನೇ ಸ್ಥಾನಕ್ಕೆ ಸಿಗುತ್ತದೆ, ಇಲ್ಲಿ ಫೋನ್ ನಂಬರ್‌ಗಳು ಇದೆ. ನಾಳೆ ನಿಮ್ಮ ಕೊಠಡಿಗೆ ಕರೆಸಿ, ಮುಖ್ಯಮಂತ್ರಿಗಳು ಕರೆಸಲಿ, ಈ ಮೊಬೈಲ್ ನಂಬರ್ ಕೆ.ಪಿ.ಎಸ್.ಸಿ. ನಂಬರ್

ಹೌದೋ ಅಲ್ಲವೋ ನೋಡಿ. ಕೆ.ಪಿ.ಎಸ್.ಸಿ. ಯಿಂದ ಮೊಬೈಲ್ ನಂಬರ್‌ನಿಂದ ಫೋನ್ ಮಾಡಿ ಆ ಹೆಣ್ಣು ಮಗಳನ್ನು ಕರೆಸಿಕೊಂಡು 75 ಲಕ್ಷ ರೂ.ಗಳನ್ನು ಡಿಮ್ಯಾಂಡ್ ಮಾಡಿರುವಂಥದ್ದು, ಪಿ.ಎ. ಮೂರು ಬಾರಿ ಆ ಹೆಣ್ಣು ಮಗಳಿಗೆ ಫೋನ್ ಮಾಡಿ ಕರೆಸಿರುವಂಥದ್ದು, ಇವೆಲ್ಲಾ ನಡೆದಿರುವಂಥ ಘಟನೆ, ಇವತ್ತು ಈ ಪರೀಕ್ಷೆಯಲ್ಲಿ ಕಷ್ಟಪಟ್ಟು ಓದಿ ರ್‍ಯಾಂಕ್ ಪಡೆದಿರುವಂಥವಳಿಗೆ, 200 ಅಂಕಗಳನ್ನು internal ನಲ್ಲಿ ಕೊಡುವ ಪದ್ಧತಿ ಏನಿದೆ ಅದನ್ನು ತಪ್ಪಿಸಬೇಕು. 10 ರಿಂದ 20 ಅಂಕಗಳವರೆಗೆ internal ನಲ್ಲಿ ಕೊಡುವಂಥ ರೀತಿಯಲ್ಲಿ ತರಬೇಕು. ಯಾವ ಡಾ: ಮೈಥಿಲಿಗೆ ಅನ್ಯಾಯವಾಗಿದೆ, ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ಇವರನ್ನು ಕರೆಸಿ ತಕ್ಷಣ ಆಗಿರುವಂಥ ಅನ್ಯಾಯವನ್ನು ಸರಿಪಡಿಸಬೇಕು. ಈ ಒಂದು ಕೆ.ಪಿ.ಎಸ್.ಸಿ. ವ್ಯವಸ್ಥೆಯನ್ನು ಸರಿಪಡಿಸದಿದ್ದರೆ ನೂರಾರು ಜನ ಮೆರಿಟ್‌ನಲ್ಲಿ ಪಾಸ್ ಮಾಡಿರುವಂಥ ವ್ಯಕ್ತಿಗಳಿಗೆ ಅನ್ಯಾಯವಾಗುತ್ತದೆ. ಈಗ ಸಾಕ್ಷ್ಯಾಧಾರಗಳನ್ನು ಆ ಹೆಣ್ಣು ಮಗಳು ಧೈರ್ಯ ಮಾಡಿ ಮೊಬೈಲ್ ಫೋನ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಈ ಸಂಗತಿಯನ್ನು ಹೊರಗೆ ತಂದಿದ್ದಾಳೆ. ಇಂಥ ಸಂಗತಿ ನಮ್ಮ ರಾಜ್ಯದ ಇತಿಹಾಸದಲ್ಲಿ ಹಿಂದೆ ನಡೆದಿಲ್ಲ. ಈಗ ನಡೆದಿದೆ. ಈಗ ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ತಕ್ಷಣ ಇದನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಡಾ: ಮೈಥಿಲಿಯವರಿಗೆ ನ್ಯಾಯ ಒದಗಿಸಿಕೊಡಬೇಕೆಂದು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಮಾನ್ಯ ಯಡಿಯೂರಪ್ಪನವರು ಈ ವಿಷಯವನ್ನು ಪ್ರಸ್ತಾಪ ಮಾಡಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇದಕ್ಕೆ ನಾಳೆ ಅವರಿಗೆ ಉತ್ತರವನ್ನು ಒದಗಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಯಡಿಯೂರಪ್ಪನವರೆ, ಆ ಹುಡುಗಿಗೆ ಕಂಪ್ಲೆಂಟ್ ಕೊಡಲು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಮುಖ್ಯಮಂತ್ರಿಗಳೆ, ಇಂಥದ್ದೆಲ್ಲವು ನಡೆಯದಂತೆ ನೋಡಿಕೊಳ್ಳಿ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಯಡಿಯೂರಪ್ಪನವರೆ, ನೀವು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಿದ್ದೀರಿ. ನಾಳೆ ಉತ್ತರ ಕೊಡುವಾಗ ಸವಿವರವಾಗಿ ಎಲ್ಲವನ್ನು ಹೇಳುತ್ತೇನೆ. ತದನಂತರ ಏನಾದರೂ ಕ್ಲಾರಿಫಿಕೇಶನ್, ನೀವು ಇನ್ನೊಂದು ಬಾರಿ ಬೇಕಾದರೆ ಕೇಳಿ.